ಕಿರುಸುದ್ದಿ

ರಾಜ್ಯಮಟ್ಟದ ಸಾಹಿತ್ಯ ಸ್ಪರ್ಧೆಯ ಫಲಿತಾಂಶ

ಮಂಗಳೂರು: ಯುವವಾಹಿನಿ ಬಂಟ್ವಾಳ ಘಟಕವು ಸಾಹಿತ್ಯ ಬರವಣಿಗೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಕವಿ, ಸಾಹಿತಿ, ಸಂಘಟಕ ಬಿ.ತಮ್ಮಯ್ಯ ನೆನಪಿನ ರಾಜ್ಯಮಟ್ಟದ ಸಾಹಿತ್ಯ ಸ್ಪರ್ಧೆಯನ್ನು ಆಯೋಜಿಸಿದ್ದು, ಸಾಹಿತ್ಯದ ಎರಡು ಪ್ರಕಾರಗಳನ್ನು ಕೇಂದ್ರೀಕರಿಸಿ ನಡೆಸಿದ ಈ ಸಾಹಿತ್ಯ ಸ್ಪರ್ಧೆಯ ಫಲಿತಾಂಶ ಪ್ರಕಟಗೊಂಡಿದೆ. 'ಆತೀ ಸಣ್ಣಕಥೆ' ಸ್ಪರ್ಧೆಯಲ್ಲಿ ಸುಲ್ತಾನ್ ಮಾನ್ಸೂರು ಮಂಚಿ ಅವರ ಸಣ್ಣಕಥೆ 'ಜಾಥಾ' ಪ್ರಥಮ ಸ್ಥಾನ, ಸ್ಮಿತಾ ಅಮೃತರಾಜ್ ಸಂಪಾಜೆ ಅವರ ಸಣ್ಣಕಥೆ 'ಸ್ವೋಟ' ದ್ವಿತೀಯ ಬಹುಮಾನ ಪಡೆದಿದೆ. ಲಲಿತ ಪ್ರಬಂಧ ಸ್ಪರ್ಧೆಯಲ್ಲಿ ರೂಪಕಲಾ ಆಳ್ವ ಅವರ 'ಬೂಬು ಎಂಬ ಮರಿ-ಮೊಮ್ಮಗಳು' ಪ್ರಥಮ ಬಹುಮಾನ, ನಳಿನಿ ಭೀಮಪ್ಪ ಧಾರವಾಡ ಅವರ 'ಮುಡಿಯಿಂದ ಜಾರುತಿಹವೋ...!' ಲಲಿತ ಪ್ರಬಂಧ ದ್ವಿತೀಯ ಬಹುಮಾನ ಗಳಿಸಿದೆ.

ಶಾಲಾ ಅಧ್ಯಾಪಿಕೆ ರೈಲು ಡಿಕ್ಕಿ ಹೊಡೆದು ಮೃತ್ಯು

ಕಾಸರಗೋಡು: ಉಪ್ಪಳದ ಶಾಲೆಯೊಂದರಲ್ಲಿ ತಾತ್ಕಾಲಿಕ ಅಧ್ಯಾಪಿಕೆಯಾಗಿ ಸೇವೆ ಸಲ್ಲಿಸುತ್ತಿದ್ದ ಚೆರ್ವತ್ತೂರು ತುರ್ತಿ ಆಲಿನಪುರತ್ ನಿವಾಸಿ ಕೀರ್ತನಾ (24) ಎಂಬವರು ರೈಲುಗಾಡಿ ಡಿಕ್ಕಿ ಹೊಡೆದು ಮೃತಪಟ್ಟ ಘಟನೆ ನಡೆದಿದೆ. ನೀಲೇಶ್ವರ ಸಮೀಪದ ಪಳ್ಳಿಕೆರೆ ಕರುತ್ತಗೇಟ್ ಶ್ರೀ ಸುಬ್ರಹ್ಮಣ್ಯ ಕ್ಷೇತ್ರ ಬಳಿಯ ರೈಲು ಹಳಿಯಲ್ಲಿ ಅವರ ಮೃತದೇಹ ಕಂಡುಬಂದಿದೆ. ಭಾನುವಾರ ಬೆಳಗ್ಗೆ ತಿರುವನಂತಪುರ – ಮಂಗಳೂರು ಎಕ್ಸ್‌ಪ್ರೆಸ್ ರೈಲುಗಾಡಿಯು ಹಳಿಯಲ್ಲಿ ಹಾದುಹೋದ ಬಳಿಕ ಆಕೆಯ ಮೃತದೇಹ ಪತ್ತೆಯಾಯಿತು. ನೀಲೇಶ್ವರ ಪೊಲೀಸರು ಸ್ಥಳಕ್ಕಾಗಮಿಸಿ ತಪಾಸಣೆ ನಡೆಸಿದರು. ಚೆರ್ವತ್ತೂರು ವಳಪ್ಪಿಲ್ ಕೃಷ್ಣನ್ ಮತ್ತು ಪ್ರಿಯಾ ದಂಪತಿಯ ಪುತ್ರಿಯಾದ ಮೃತರು ಸಹೋದರಿಯರಾದ ಐಶ್ವರ್ಯ, ಶ್ರೇಯಾ ಅವರನ್ನು ಅಗಲಿದ್ದಾರೆ.

ಮಾದಕ ವಸ್ತು ಮಾರಾಟ ವಿರೋಧಿಸಿದ ದ್ವೇಷ: ಓರ್ವ ಬಂಧನ

ಕಾಸರಗೋಡು: ಮಾದಕ ವಸ್ತು ಮಾರಾಟವನ್ನು ವಿರೋಧಿಸಿದ ದ್ವೇಷದಿಂದ ಕಾರಿನಲ್ಲಿ ಆಗಮಿಸಿದ ತಂಡವೊಂದು ವ್ಯಕ್ತಿಯೋರ್ವನ ಮೇಲೆ ತಲವಾರು ಬೀಸಿರುವುದಾಗಿ ಆರೋಪಿಸಲಾಗಿದೆ. ಅಜಾನೂರು ತೆಕ್ಕೇಪುರದ ಎಂ.ಮುಹಮ್ಮದ್ ಮುಬಾಶ್ (30) ಎಂಬವರ ದೂರಿನಂತೆ ತೆಕ್ಕೇಪುರದ ಸಮೀರ್ ಹಾಗೂ ಕಂಡರೆ ಪತ್ತೆಹಚ್ಚಬಹುದಾದ ಇನ್ನಿಬ್ಬರ ವಿರುದ್ಧ ಹೊಸದುರ್ಗ ಪೊಲೀಸರು ನರಹತ್ಯಾ ಯತ್ನ ಕೇಸು ದಾಖಲಿಸಿದ್ದಾರೆ. ಪ್ರಕರಣದ ಮುಖ್ಯ ಆರೋಪಿಯಾದ ಸಮೀರ್ (30) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ಭಾನುವಾರ ರಾತ್ರಿ ತೆಕ್ಕೇಪುರದಲ್ಲಿ ಈ ಘಟನೆ ನಡೆದಿದೆ. ಸಮೀರ್ ವಿರುದ್ಧ ಅನೇಕ ಕೇಸುಗಳು ದಾಖಲಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಗಾಂಜಾ ಮಾರಾಟಕ್ಕೆ ಅಡ್ಡಿ: ಆಟೋ ಚಾಲಕನಿಗೆ ಇರಿತ

ಕುಂಬಳೆ: ಗಾಂಜಾ ಮಾರಾಟಕ್ಕೆ ಅಡ್ಡಿಪಡಿಸಿದರೆಂಬ ದ್ವೇಷದಿಂದ ಆಟೋ ಚಾಲಕನಿಗೆ ಇರಿದು ಕೊಲೆಗೈಯ್ಯಲೆತ್ನಿಸಿದ ಪ್ರಕರಣಕ್ಕೆ ಸಂಬಂಧಿಸಿ ಆರೋಪಿಯನ್ನು ಕುಂಬಳೆ ಪೊಲೀಸರು ಬಂಧಿಸಿದ್ದಾರೆ. ಕುಂಬಳೆ ಪೇಟೆಯಲ್ಲಿ ಶನಿವಾರ ಸಂಜೆ ಈ ಘಟನೆ ನಡೆದಿತ್ತು. ಕುಂಬಳೆಯಲ್ಲಿ ಆಟೋ ಚಾಲಕನಾಗಿರುವ ಶಾಂತಿಪ್ಪಳ್ಳ ದಿನೇಶ್ ಬೀಡಿ ಕಂಪೆನಿ ಸಮೀಪದ ನಿವಾಸಿ ಮುಹಮ್ಮದ್ ಅಶ್ರಫ್ (33) ಎಂಬವರಿಗೆ ಇರಿದು ಗಾಯಗೊಳಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿ ಪೆರುವಾಡ್‌ನಲ್ಲಿ ವಾಸಿಸುವ ಕಣ್ಣೂರು ನಾರಾತ್ ಉಳಿಕ್ಕಲ್ ನಿವಾಸಿ ಮುಹಮ್ಮದ್ ರಾಫಿ (34) ಎಂಬಾತನನ್ನು ಬಂಧಿಸಲಾಗಿದೆ. ಗಾಂಜಾ ಮಾರಾಟಕ್ಕೆ ತಡೆಯುಂಟು ಮಾಡಿದರೆಂದು ಆರೋಪಿಸಿ ಈ ಕೃತ್ಯ ಎಸಗಲಾಗಿದೆ.

10 ಸಾವಿರ ಪ್ಯಾಕೆಟ್ ತಂಬಾಕು ಸಹಿತ ಓರ್ವ ಸೆರೆ

ಮಂಜೇಶ್ವರ: ಕರ್ನಾಟಕ ಭಾಗದಿಂದ ಕಾರಿನಲ್ಲಿ ಸಾಗಿಸುತ್ತಿದ್ದ 10 ಸಾವಿರದಷ್ಟು ಪ್ಯಾಕೆಟ್ ನಿಷೇಧಿತ ತಂಬಾಕು ಉತ್ಪನ್ನಗಳ ಸಹಿತ ಓರ್ವನನ್ನು ಮಂಜೇಶ್ವರ ಪೊಲೀಸರು ಸೆರೆ ಹಿಡಿದಿದ್ದಾರೆ. ಕಣ್ಣೂರು ಕನಿಯೇರಿ ನಿವಾಸಿ ಅಬ್ದುಲ್ ಇರ್ಫಾನ್ (23) ಬಂಧಿತ ಆರೋಪಿ. ಮಂಜೇಶ್ವರ ಠಾಣೆ ಸಬ್ ಇನ್‌ಸ್ಪೆಕ್ಟರ್ ರತೀಶ್‌ಗೋಪಿ, ಎಎಸ್‌ಐ ಸದನ್, ಸಿಪಿಒಗಳಾದ ರಜೀಶ್ ಕಾಟಾಂಬಳ್ಳಿ, ನಿತಿನ್‌ಕುಮಾರ್, ಅನೀತ ಎಂಬವರನ್ನೊಳಗೊಂಡ ತಂಡ ಕಾರ್ಯಾಚರಣೆ ನಡೆಸಿದೆ.

ಜೂ.20: ಮುಂಡಾಜೆ ಅನುದಾನಿತ ಪ್ರೌಢ ಶಾಲೆ ನೂತನ ಕಟ್ಟಡ 'ಸಿಂದೂರ'ದ ಲೋಕಾರ್ಪಣೆ

ಬೆಳ್ತಂಗಡಿ: ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು, ರೋಟರಿ ಕ್ಲಬ್ ಬೆಳ್ತಂಗಡಿ ಇವುಗಳ ಸಂಯುಕ್ತ ಆಶ್ರಯದಲ್ಲಿ ರೋಟರಿ ಬೆಂಗಳೂರು ಇಂದಿರಾ ನಗರ, ಕ್ಯಾನ್ ಫಿನ್ ಹೋಮ್ಸ್ ಬೆಂಗಳೂರು, ಮತ್ತಿತರ ದಾನಿಗಳ ನೆರವಿನಿಂದ ನೂತನವಾಗಿ ನಿರ್ಮಾಣಗೊಂಡ ಮುಂಡಾಜೆ ಅನುದಾನಿತ ಕನ್ನಡ ಮಾಧ್ಯಮ ಪ್ರೌಢಶಾಲೆಯ ಕಟ್ಟಡ ಸಿಂದೂರ ಜೂ. 20ರಂದು ಬೆಳಿಗ್ಗೆ 10 ಗಂಟೆಗೆ ಲೋಕಾರ್ಪಣೆಗೊಳ್ಳಲಿದೆ ಎಂದು ಬೆಳ್ತಂಗಡಿ ರೋಟರಿ ಕ್ಲಬ್‌ನ ಮಾಜಿ ಅಧ್ಯಕ್ಷ ಆನಂತ ಭಟ್ ಮಚ್ಚಿಮಲೆ ಹೇಳಿದರು.

ಅವರು ಮುಂಡಾಜೆ ಪ್ರೌಢಶಾಲೆಯಲ್ಲಿ ಸೋಮವಾರ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ.ಕಲ್ಲಡ್ಕ ಪ್ರಭಾಕರ ಭಟ್ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಲಿದ್ದು, ರೋಟರಿ ಜಿಲ್ಲೆ 3181ರ ಜಿಲ್ಲಾ ಗವರ್ನರ್ ವಿಕ್ರಂ ದತ್ತ ಉದ್ಘಾಟನೆ ನೆರವೇರಿಸಲಿರುವರು. ಸಂಸದ ಕ್ಯಾ. ಬ್ರಿಜೇಶ್ ಚೌಟ, ಶಾಸಕ ಹರೀಶ್ ಪೂಂಜ, ಎಂಎಲ್‌ಸಿ ಕೆ. ಪ್ರತಾಪಸಿಂಹ ನಾಯಕ್, ಮುಂಡಾಜೆ ಗ್ರಾ. ಪಂ. ಅಧ್ಯಕ್ಷ ಗಣೇಶ ಬಂಗೇರ, ಕ್ಯಾನ್ ಫಿನ್ ಹೋಮ್ಸ್‌ನ ಡಿಜಿಎಂ ಪ್ರಶಾಂತ್ ಜೋಷಿ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಉದ್ಯಮಿ ಶಶಿಧರ್ ಶೆಟ್ಟಿ ಬರೋಡ, ಉಜಿರೆ ಲಕ್ಷ್ಮಿ ಇಂಡ್ಟ್ರೀಸ್ ನ ಕೆ. ಮೋಹನ್ ಕುಮಾರ್, ಶತಾಬ್ದಿ ವಿದ್ಯಾಲಯ ಸಮಿತಿ ಅಧ್ಯಕ್ಷ ಶ್ರೀಧರ ಜಿ.ಭಿಡೆ, ಬಿಇಒ ವೆಂಕಟೇಶ ತುಳುಪುಳೆ ನಿಕಟ ಪೂರ್ವ ಜಿಲ್ಲಾ ಗವರ್ನರ್ ಎಚ್.ಆರ್.ಕೇಶವ, ಇಂದಿರಾ ನಗರ ರೋಟರಿ ಅಧ್ಯಕ್ಷೆ ಸುಪ್ರಿಯಾ ಕಂದಾರಿ, ಬೆಳ್ತಂಗಡಿ ರೋಟರಿ ಕ್ಲಬ್ ಅಧ್ಯಕ್ಷ ಪೂರನ್ ವರ್ಮ, ನಿಕಟ ಪೂರ್ವ ಅಧ್ಯಕ್ಷ ಆನಂತ ಭಟ್ ಮಚ್ಚಿಮಲೆ ಭಾಗವಹಿಸಲಿದ್ದಾರೆ ಎಂದರು.

ರೋಟರಿ ಕ್ಲಬ್ ಅಧ್ಯಕ್ಷ ಪೂರನ್ ವರ್ಮ, ಕಾರ್ಯದರ್ಶಿ ಸಂದೇಶ್ ರಾವ್, ಮಾಜಿ ಕಾರ್ಯದರ್ಶಿ ವಿದ್ಯಾ ಕುಮಾರ್ ಕಾಂಚೋಡು, ಮುಂಡಾಜೆ ವಿವೇಕಾನಂದ ವಿದ್ಯಾಸಂಸ್ಥೆಗಳ ಅಧ್ಯಕ್ಷ ವಿನಯ ಚಂದ್ರ, ಕಾರ್ಯದರ್ಶಿ ನಾರಾಯಣಗೌಡ, ಕನ್ನಡ ಮಾಧ್ಯಮ ಶಾಲಾ ಸಂಚಾಲಕ ನಾರಾಯಣ ಘಡಕೆ, ಮುಖ್ಯೋಪಾಧ್ಯಾಯಿನಿ ಜಯಂತಿ ಉಪಸ್ಥಿತರಿದ್ದರು.

ದಾನಿಗಳ ಸಹಕಾರದಿಂದ ನೂತನ ಕಟ್ಟಡ ನಿರ್ಮಾಣ

ಮುಂಡಾಜೆಯಲ್ಲಿ 1969ರಲ್ಲಿ ಕೀರ್ತಿಶೇಷ ಜೆ.ಎನ್.ಭಿಡೆಯವರು ಇಲ್ಲಿ ಹೈಸ್ಕೂಲ್ ಸ್ಥಾಪಿಸಿದ್ದರು. 1991ರಲ್ಲಿ ಜೂನಿಯರ್ ಕಾಲೇಜು, ಸರಸ್ವತಿ ಆಂಗ್ಲ ಮಾಧ್ಯಮ ಶಾಲೆಯನ್ನು ಸ್ಥಾಪಿಸಿದರು. ಇವರ ನಂತರ ಶ್ರೀಧರ್ ಜಿ.ಭಿಡೆಯವರು ಸಂಸ್ಥೆ ಮುನ್ನಡೆಸಿದರು. ಮುಂಡಾಜೆ ಅನುದಾನಿತ ಕನ್ನಡ ಮಾಧ್ಯಮ ಪ್ರೌಢಶಾಲೆಯ ಕಟ್ಟಡ ಶಿಥಿಲವಾಗಿದ್ದು, ಇದೀಗ 18 ಸಾವಿರ ಚದರ ಅಡಿಯಲ್ಲಿ ತರಗತಿ ಕೊಠಡಿ, ಕಚೇರಿ ಕೊಠಡಿ, ಸಿಬ್ಬಂದಿ ಕೊಠಡಿ, ಕಂಪ್ಯೂಟರ್ ಲ್ಯಾಬ್, ವಿದ್ಯಾರ್ಥಿಗಳಿಗೆ ಪ್ರತ್ಯೇಕ ಶೌಚಾಲಯ ಮೊದಲಾದ ಸೌಲಭ್ಯಗಳೊಂದಿಗೆ 2.25 ಕೋಟಿ ರೂ.ವೆಚ್ಚದಲ್ಲಿ ಸುಮಾರು 40ಕ್ಕಿಂತ ಅಧಿಕ ದಾನಿಗಳ ಸಹಕಾರದಿಂದ ನೂತನ ಕಟ್ಟಡ ನಿರ್ಮಾಣಗೊಂಡಿದೆ ಎಂದರು.

ಪ್ರವಾಹ ತಗ್ಗಿಸುವಿಕೆ ಪ್ರಯತ್ನಗಳನ್ನು ತೀವ್ರಗೊಳಿಸಲು ಪಾಲಿಕೆಗೆ ಡಿಸಿ ನಿರ್ದೇಶನ

ಮಂಗಳೂರು: ನಗರದಲ್ಲಿ ಕೃತಕ ಪ್ರವಾಹ ಮತ್ತು ನೈರ್ಮಲ್ಯ ಸಮಸ್ಯೆಗಳನ್ನು ಪರಿಹರಿಸಲು ತೀವ್ರಗತಿಯಲ್ಲಿ ಕ್ರಮ ಕೈಗೊಳ್ಳಲು ಮಹಾನಗರಪಾಲಿಕೆ ಆಡಳಿತಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ ಅವರು ನಿರ್ದೇಶನ ನೀಡಿದ್ದಾರೆ.

ಅವರು ಸೋಮವಾರ ಈ ಸಂಬಂಧ ಮಹಾನಗರಪಾಲಿಕೆ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಪಂಪ್‌ವೆಲ್, ಕೊಟ್ಟಾರಚೌಕಿ, ಕೊಡಿಯಾಲ್ ಗುತ್ತು, ಕಣ್ಣೂರು, ಬೈಲಾರೆ, ಪಾಂಡೇಶ್ವರ ಮತ್ತಿತರ ಕಡೆ ಮರುಕಳಿಸುವ ಪ್ರವಾಹವನ್ನು ತಗ್ಗಿಸಲು ಕೂಡಲೇ ಕ್ರಮ ಕೈಗೊಳ್ಳಬೇಕು. ಮಳೆನೀರಿಗೆ ಪರ್ಯಾಯ ತಿರುವು ಮಾರ್ಗಗಳನ್ನು ಗುರುತಿಸಿ ಮತ್ತು ಕಾರ್ಯಗತಗೊಳಿಸಬೇಕು. ಪ್ರವಾಹಕ್ಕೆ ಕಾರಣವಾಗುವ ಜಲಾನಯನ ಪ್ರದೇಶಗಳ ವಿವರವಾದ ಮೌಲ್ಯಮಾಪನವನ್ನು ನಡೆಸುವಂತೆ ಅವರು ಸೂಚಿಸಿದರು.

ಚರಂಡಿಯ ಅಡಚಣೆಗಳನ್ನು ತೆರವುಗೊಳಿಸಬೇಕು. ತಾಂತ್ರಿಕ ಕಾರ್ಯಸಾಧ್ಯತೆಯೊಂದಿಗೆ ಸ್ಥಳವಾರು ಪ್ರವಾಹತಗ್ಗಿಸುವ ಯೋಜನೆಗಳನ್ನು ರೂಪಿಸಬೇಕು ಎಂದು ಅವರು ತಿಳಿಸಿದರು.

ಪಾಲಿಕೆಯ ಆರೋಗ್ಯ ವಿಭಾಗವು ಘನತ್ಯಾಜ್ಯ ಸಂಗ್ರಹ ದಕ್ಷತೆಯನ್ನು ಸುಧಾರಿಸಬೇಕು. ವಿಶೇಷವಾಗಿ ತಗ್ಗು ಪ್ರದೇಶ ಮತ್ತು ನೀರು ತುಂಬಿದ ಪ್ರದೇಶಗಳಲ್ಲಿ ಮಳೆ ನೀರು ಹರಿದು ಹೋಗದಂತೆ ತಡೆಯಲು ಎಲ್ಲಾ ಮಳೆ ನೀರಿನ ಚರಂಡಿಗಳಲ್ಲಿ ಹೂಳು ತೆಗೆಯುವ ಕಾರ್ಯಾಚರಣೆಯನ್ನು ತೀವ್ರಗೊಳಿಸಬೇಕು. ಮಳೆಗಾಲದಲ್ಲಿ ಸಾರ್ವಜನಿಕರಿಗೆ ಆನಾನುಕೂಲತೆಯನ್ನು ತಡೆಗಟ್ಟಲು ತಕ್ಷಣದ ಕ್ರಮ ಮತ್ತು ಅಂತರ-ಇಲಾಖೆಯ ಸಮನ್ವಯವನ್ನು ಜಿಲ್ಲಾಧಿಕಾರಿ ಒತ್ತಿ ಹೇಳಿದರು.

ಸಭೆಯಲ್ಲಿ ಪಾಲಿಕೆ ಆಯುಕ್ತ ರವಿಚಂದ್ರ ನಾಯಕ್ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಕಡಬದ ಪ್ರದೀಪ್, ಲಕ್ಷ್ಮೀಶ ಬಳ್ಳಿತ್ತಡ್ಡ ಅನುಭವ
ಯುದ್ಧ ಭೀತಿ ಇದ್ದರೂ ಇಸ್ರೇಲ್ ರಕ್ಷಣಾ ವ್ಯವಸ್ಥೆಯಿಂದ ನಾವು ಸುರಕ್ಷಿತರಾಗಿದ್ದೇವೆ

ಕಡಬ: ಇರಾನಿನ ಅಣು ಸ್ಥಾವರದ ಮೇಲೆ ಇಸ್ರೇಲಿನ ಭೀಕರ ದಾಳಿಯ ಬಳಿಕ ಉಂಟಾಗಿರುವ ಪ್ರತಿದಾಳಿಯ ನೆಲೆಗಟ್ಟಿನಲ್ಲಿ ಇಸ್ರೇಲ್ ದೇಶದಾದ್ಯಂತ ಯುದ್ಧದ ವಾತಾವರಣವಿದೆ. ಶುಕ್ರವಾರದಿಂದಲೇ ಇಲ್ಲಿನ ಶಾಲೆಗಳಿಗೆ ಒಂದು ವಾರದ ರಜೆ ಘೋಷಿಸಲಾಗಿದೆ. ರಸ್ತೆಗಳಲ್ಲಿ ಬಸ್ ಸಂಚಾರ ನಿರ್ಬಂಧಿಸಲಾಗಿದ್ದು, ಜನಸಂಚಾರ ವಿರಳವಾಗಿದೆ. ಅಲ್ಲೊಂದು ಇಲ್ಲೊಂದು ಅಗತ್ಯ ವಸ್ತುಗಳ ಅಂಗಡಿ ಮುಂಗಟ್ಟುಗಳು ಮಾತ್ರ ತೆರೆದಿವೆ. ಮಿಸೈಲ್ ದಾಳಿಗಳು ಹೆಚ್ಚಿನ ಸಂದರ್ಭದಲ್ಲಿ ರಾತ್ರಿ ಆಗುತ್ತಿವೆ. ಒಟ್ಟಿನಲ್ಲಿ ಯುದ್ಧದ ಭೀತಿ ಇದ್ದರೂ ಇಲ್ಲಿರುವ ಅತ್ಯುತ್ತಮ ಸುರಕ್ಷತಾ ವ್ಯವಸ್ಥೆಯಿಂದ ನಾವು ಸುರಕ್ಷಿತರಾಗಿದ್ದೇವೆ ಎಂದು ಇಸ್ರೇಲ್‌ನ ಟೆಲ್ ಅವೀವ್‌ನಲ್ಲಿರುವ ಕಡಬ ತಾಲೂಕಿನ ಕ್ಯೂಲ ನಿವಾಸಿ ಪ್ರದೀಪ್ ಕ್ಯೂಲ ತಿಳಿಸಿದ್ದಾರೆ.



ಇಲ್ಲಿ ಹೋಂ ಫ್ರಂಟ್ ಕಮಾಂಡೋ ಎಂಬ ರಕ್ಷಣಾ ವ್ಯವಸ್ಥೆಯಿದ್ದು, ಅದರ ಮೊಬೈಲ್ ಅಪ್ಲಿಕೇಷನ್‌ನನ್ನು ನಾವು ಡೌನ್‌ಲೋಡ್ ಮಾಡಿಕೊಳ್ಳಬೇಕಾಗುತ್ತದೆ. ದಾಳಿಯ ಸೂಚನೆ ದೊರೆತಾಗಲೇ ಈ ಅಪ್ಲಿಕೇಷನ್‌ನಲ್ಲಿ ಎಚ್ಚರಿಕೆಯ ಸಂದೇಶ ದೊರೆಯುತ್ತದೆ. ಯಾವಾಗ ಮಿಸೈಲ್‌ಗಳನ್ನು ಹಾರಿಸಲಾಯಿತು. ಯಾವ ಕಡೆ ಬರುತ್ತಿದೆ. ಗುರಿ ತಲುಪಬಹುದಾದ ಸಮಯವೆಲ್ಲಾ ನಿಖರವಾಗಿ ಹೋಂ ಫ್ರಂಟ್ ಕಮಾಂಡೋ ಮೊಬೈಲ್ ಅಪ್ಲಿಕೇಷನ್ ಮೂಲಕ ತಿಳಿಸುತ್ತದೆ. ಇದಲ್ಲದೇ, ನೆಟ್‌ವರ್ಕ್ ಇಲ್ಲದಿದ್ದರೂ ಮೊಬೈಲ್‌ಗೆ ಅಲರ್ಟ್ ಸಂದೇಶ ಬರುತ್ತದೆ. ಅಲ್ಲದೇ ಸೈರನ್ ಮೊಳಗುತ್ತದೆ. ಆಗ ನಾವೆಲ್ಲಾ ಬಂಕರ್‌ಗೆ ಹೋಗಿ ಆಶ್ರಯ ಪಡೆಯುತ್ತೇವೆ. ಅಲ್ಲದೇ, ರಸ್ತೆಗಳಲ್ಲಿ ಇಲ್ಲಿನ ಭದ್ರತಾ ಕಾರ್ಯಪಡೆಯವರು ಗಸ್ತು ತಿರುಗುತ್ತಲೇ ಇದ್ದಾರೆ ಎಂದು ಅವರು ವಿವರಿಸಿದರು.

ಬಂಕರ್‌ನಲ್ಲಿ ಸುರಕ್ಷಿತವಾಗಿದ್ದೇವೆ:ಲಕ್ಷ್ಮೀಶ



ರಾತ್ರಿಯಾಗುತ್ತಿದ್ದಂತೆಯೇ ಆಗಸದಲ್ಲಿ ಬೆಳಕಿನ ಸಂಚಾರ ಆರಂಭವಾಗುತ್ತದೆ. ಅಲ್ಲಲ್ಲಿ ಬಂಕರ್‌ಗಳಿವೆ. ನಮಗೆ ಸುಲಭದಲ್ಲಿ ಸಿಗುವ ಯಾವ ಬಂಕರ್‌ಗೆ ಹೋದರೂ ಅದರೊಳಗೆ ಸುರಕ್ಷಿತವಾಗಿ ಕುಳಿತುಕೊಳ್ಳಬಹುದಾಗಿದೆ. ನಾವೀಗ ಬಂಕರ್‌ನಲ್ಲಿ ಸುರಕ್ಷಿತವಾಗಿದ್ದೇವೆ. ಇಲ್ಲಿನ ಜನರು ನಾವು ಭಾರತೀಯರು ಎಂದು ನಮ್ಮನ್ನು ಕಡೆಗಣಿಸುವುದಿಲ್ಲ. ಅವರು ಕೂಡಾ ನಮ್ಮ ಜಾಗರೂಕತೆಯ ಬಗ್ಗೆ ಅವರಷ್ಟೇ ಕಾಳಜಿ ತೋರುತ್ತಾರೆ. ಇಲ್ಲಿ ಯುದ್ಧದ ಭೀತಿ ಇದ್ದರೂ ಇಸ್ರೇಲ್ ದೇಶದ ಉತ್ತಮ ರಕ್ಷಣಾ ವ್ಯವಸ್ಥೆಯಿಂದ ನಾವು ಸುರಕ್ಷಿತ ಹಾಗೂ ನೆಮ್ಮದಿಯಿಂದ ಇದ್ದೇವೆ ಎಂದು 75 ದಿನಗಳ ಹಿಂದಷ್ಟೇ ಉದ್ಯೋಗ ನಿಮಿತ್ತ ಇಸ್ರೇಲ್‌ಗೆ ತೆರಳಿ ಅಲ್ಲಿನ ಬೆನೆ ಬರಾಕ್ ಎಂಬಲ್ಲಿ ನೆಲೆಸಿರುವ ಕಡಬದ ಕುಟ್ರುಪ್ಪಾಡಿಯ ಲಕ್ಷ್ಮೀಶ ಬಳ್ಳಿತ್ತಡ್ಡ ಅವರು ತಿಳಿಸಿದ್ದಾರೆ.

ಅರುಣ್ ಗೋಡ್ವಿನ್ ಮಿನೇಜಸ್



ಉಪ್ಪಿನಂಗಡಿ: ಇಸ್ರೇಲ್ ದೇಶದಾದ್ಯಂತ ಹೈ ಅಲರ್ಟ್ ಸ್ಥಿತಿ ಇದೆ. ವೈರಿ ರಾಷ್ಟ್ರದ ಆಕ್ರಮಣಗಳು ನಡೆಯುತ್ತಿದ್ದಂತೆಯೇ ಸೈರನ್‌ಗಳು ಮೊಳಗಿದಾಗ ಸೆಲ್ಟರ್‌ನೊಳಗೆ ಆಶ್ರಯ ಪಡೆಯುತ್ತಿದ್ದೇವೆ ಎಂದು ಪ್ರಸಕ್ತ ಇಸ್ರೇಲ್‌ನಲ್ಲಿರುವ ಉಪ್ಪಿನಂಗಡಿ ನಿವಾಸಿ ಅರುಣ್ ಗೋಡ್ವಿನ್ ಮಿನೇಜಸ್ ತಿಳಿಸಿದ್ದಾರೆ.

ಕಳೆದ ರಾತ್ರಿ ಟೆಲ್ ಅವೀವ್‌ನಲ್ಲಿರುವ ನಮ್ಮ ಮನೆಯ ಸಮೀಪದಲ್ಲೇ ಮಿಸೈಲೊಂದು ಅಪ್ಪಳಿಸಿತ್ತು. ದೊಡ್ಡದಾದ ಶಬ್ದ ಕೇಳಿಸಿ ಭಯದಿಂದ ಸೆಲ್ಟರ್ ನಿಂದ ಹೊರಗೆ ಬಂದಿದ್ದೇವೆ. ದಾಳಿ ಪ್ರತಿದಾಳಿಗಳು ರಾತ್ರಿ ವೇಳೆಯಲ್ಲೇ ನಡೆಯುತ್ತಿರುವುದರಿಂದ ಸಹಜವಾಗಿ ಭಯದ ವಾತಾವರಣ ಉಂಟಾಗಿದೆ. ಕಳೆದ ರಾತ್ರಿ ಮೂರು ಬಾರಿ ಸೈರನ್ ಮೊಳಗಿದ್ದು, ಮನೆ ಸಮೀಪದ ಶೆಲ್ಟರ್ (ಬಂಕರ್) ನಲ್ಲಿ ರಕ್ಷಣೆ ಪಡೆದಿರುತ್ತೇವೆ ಎಂದರು.

ಹೊರಗಡೆ ಸುತ್ತಾಡುವುದಕ್ಕೆ ನಿರ್ಬಂಧ ವಿಧಿಸಲಾಗಿದೆ. ಇರಾನ್‌ನಿಂದ ಪ್ರತಿದಾಳಿಯ ನಿರೀಕ್ಷೆಯಿಂದ ಹೆಚ್ಚಿನ ಅಲರ್ಟ್ ಇದೆ. ಯಾವುದೇ ಸಮಯದಲ್ಲಿ ಏನಾದರೂ ಸಂಭವಿಸಬಹುದೆಂಬ ಭೀತಿ ಮಾತ್ರ ಎಲ್ಲರಲ್ಲೂ ಇದೆ. ಸದ್ಯಕ್ಕೆ ಇಸ್ರೇಲ್ ಸೈನ್ಯದ ಸ್ವರಕ್ಷಣಾ ವ್ಯವಸ್ಥೆಯ ಬಲದಲ್ಲಿ ಸುರಕ್ಷಿತವಾಗಿದ್ದೇವೆ ಎಂದು ವಿವರಿಸಿದ್ದಾರೆ.

ಪಂಪು ಚಾಲನೆ ವೇಳೆ ವಿದ್ಯುತ್ ಶಾಕ್ : ಮಹಿಳೆ ಸಾವು

ಕಾಣಿಯೂರು : ಕಡಬ ತಾಲೂಕಿನ ದೋಳ್ಪಾಡಿ ಗ್ರಾಮದ ಕೂರೇಲು ಎಂಬಲ್ಲಿ ವಿದ್ಯುತ್ ಶಾಕ್‌ಗೆ ಮಹಿಳೆಯೊಬ್ಬರು ಮೃತಪಟ್ಟ ಘಟನೆ ಸೋಮವಾರ ಮಧ್ಯಾಹ್ನ ನಡೆದಿದೆ. ಮೃತಪಟ್ಟ ಮಹಿಳೆಯನ್ನು ಕೂರೇಲು ನಿವಾಸಿ ಪುರಂದರ ಎಂಬವರ ಪತ್ನಿ ಜಲಜಾಕ್ಷಿ (38) ಎಂದು ಗುರುತಿಸಲಾಗಿದೆ.

ಇವರು ಮಧ್ಯಾಹ್ನ